

بسم الله الرّحمٰن الرّحيم

# ನಾವು ಇಸ್ಲಾಮಿನ ಸುಂದರ ಉಪದೇಶಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಿದರೆ ಅದರಿಂದ ಅನ್ಯರಲ್ಲಿ ಅಸಾಧಾರಣ ಪ್ರಭಾವ ಉಂಟಾಗುವುದನ್ನು ಕಾಣುವೆವು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **03-010-2014** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಒಂದೆಡೆ ಹೀಗೆ ಹೇಳಿರುವರು: "ಇಸ್ಲಾಮ್ ಧರ್ಮದ ಉಪದೇಶಗಳ ಪ್ರಕಾರ ಇಸ್ಲಾಮ್ ಧರ್ಮವು ಎರಡು ದೊಡ್ಡ ಉದ್ದೇಶಲಕ್ಷ್ಯಗಳನ್ನು ಹೊಂದಿದೆ. ಒಂದನೆಯ ಉದ್ದೇಶ ದೇವನ ಅಸ್ತಿತ್ವದಲ್ಲಿರುವ ವಿಶ್ವಾಸ. ಅಂದರೆ ಆ ಏಕದೇವನು ವಾಸ್ತವಿಕವಾಗಿಯೂ ಅಸ್ತಿತ್ವದಲ್ಲಿದ್ದಾನೆಂದು ನಂಬುವುದು, ಅವನನ್ನು ಪ್ರೀತಿಸುವುದು ಮತ್ತು ಅವನನ್ನು ನಿಷ್ಠೆಯಿಂದ ಅನುಸರಿಸುವುದರಲ್ಲಿ ತನ್ನನ್ನು ತೊಡಗಿಸಿಕೊಳ್ಳುವುದು. ಇಸ್ಲಾಮ್ ಧರ್ಮದ ಎರಡನೆಯ ಉದ್ದೇಶ ಅಲ್ಲಾಹನ ದಾಸರ ಸೇವೆ ಮಾಡುವುದು ಮತ್ತು ಅವರೊಂದಿಗೆ ಸಹಾನುಭೂತಿಯಿಂದ ವರ್ತಿಸುವುದಾಗಿದೆ. ಇವುಗಳಿಗೋಸ್ಕರ ಎಲ್ಲಾ ಶಕ್ತಿ ಸಾಮರ್ಥ್ಯಗಳನ್ನು ವಿನಿಯೋಗಿಸಬೇಕಾಗಿದೆ. ದೊರೆಗಳಿಂದ ಹಿಡಿದು ಸಾಮಾನ್ಯ ಮನುಷ್ಯರ ತನಕ ಯಾರು ಉಪಕಾರ ಮಾಡುತ್ತಾರೋ ಅವರೊಂದಿಗೆ ಕೃತಜ್ಞತೆಯಿಂದಲೂ ಪ್ರತ್ಯುಪಕಾರ ಭಾವನೆಯಿಂದಲೂ ವರ್ತಿಸುವುದಾಗಿದೆ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಇನ್ನೊಂದು ಕಡೆ ಇಸ್ಲಾಮ್ ಧರ್ಮದ ಉಪದೇಶಗಳು ಎರಡು ಪ್ರಧಾನ ಭಾಗಗಳನ್ನು ಹೊಂದಿದೆಯೆಂದು ಹೇಳಿರುವರು. ಒಂದನೆಯದು **ಹುಖೂಖುಲ್ಲಾಹ್** ಎರಡನೆಯದು **ಹುಖೂಖುಲ್ ಇಬಾದ್**. **ಹುಖೂಖುಲ್ಲಾಹ್** (ಅಲ್ಲಾಹನ ಹಕ್ಕುಗಳು) ಎಂದರೆ ಅಲ್ಲಾಹನನ್ನು ಅನುಸರಿಸುವುದು ಆವಶ್ಯಕವೆಂದು ತಿಳಿದು ಕೊಳ್ಳುವುದಾಗಿದೆ. **ಹುಖೂಖುಲ್ ಇಬಾದ್**(ದಾಸರ ಹಕ್ಕುಗಳು) ಎಂದರೆ ಅಲ್ಲಾಹನ ಸೃಷ್ಟಿಗಳೊಂದಿಗೆ ಸಹಾನುಭೂತಿಯಿಂದ ವರ್ತಿಸುವುದಾಗಿದೆ. ಧಾರ್ಮಿಕ ಭಿನ್ನಾಭಿಪ್ರಾಯದ ಕಾರಣದಿಂದ ಯಾರನ್ನಾದರೂ ಕಷ್ಟಕ್ಕೆ ಗುರಿಪಡಿಸುವುದು ಸರಿಯಾದ ವರ್ತನೆಯಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ವಿವಿಧ ಗ್ರಂಥಗಳಲ್ಲೂ ಪ್ರಸ್ತಾವನೆಗಳಲ್ಲೂ **ಹುಖೂಖುಲ್ಲಾಹ್** ಮತ್ತು **ಹುಖೂಖುಲ್ ಇಬಾದ್**ಗೆ ಸಂಬಂಧಿಸಿ ನಾವು ಮಾಡಬೇಕಾದ ಕಡ್ಡಾಯ ಕರ್ತವ್ಯಗಳನ್ನು ವಿವರಿಸಿರುವರು. ಈಗ ಲೋಕಕ್ಕೆ ಈ ಉಪದೇಶಗಳ ಆವಶ್ಯಕತೆ ಇದೆ. ಈ ಉಪದೇಶಗಳನ್ನು ನಾವು ಲೋಕದ ಮುಂದೆ ಇರಿಸುವಾಗ ಜನರು ಆಶ್ಚರ್ಯಚಕಿತರಾಗುತ್ತಾರೆ. ಇಸ್ಲಾಮೀ ಉಪದೇಶಗಳನ್ನು ಅವುಗಳ ಒಂದೊಂದು ಅಂಶಗಳನ್ನು ನಾವು ಸವಿಸ್ತಾರವಾಗಿ ವಿವರಿಸುವಾಗ ಅವುಗಳನ್ನು ಆಲಿಸುವವರ ಆಶ್ಚರ್ಯ ಇನ್ನಷ್ಟು ವರ್ಧಿಸುತ್ತದೆ. ಏಕೆಂದರೆ ಮುಸ್ಲಿಮೇತರ ಲೋಕವು ಇಸ್ಲಾಮ್ ಧರ್ಮದ ಶತ್ರುಗಳಿಂದ ಇಸ್ಲಾಮಿನ ಬಗ್ಗೆ ತಿಳಿದುಕೊಳ್ಳುತ್ತಾ ಇದ್ದುದೇನೆಂದರೆ ಇಸ್ಲಾಮ್ ಭೀಕರ ಕೃತ್ಯಗಳನ್ನು ಪ್ರೋತ್ಸಾಹಿಸುವ ಮತ್ತು ಅನ್ಯರ ಹಕ್ಕುಗಳನ್ನು ಕಿತ್ತುಕೊಳ್ಳುವ ಧರ್ಮವಾಗಿದೆ ಎಂದು. ಇಸ್ಲಾಮಿನ ಶತ್ರುಗಳು ತಮ್ಮ ವಾದವನ್ನು ಸಾಬೀತುಗೊಳಿಸಲು ಕೆಲವು ಭೀಕರವಾದಿ ಮುಸ್ಲಿಮ್ ಗುಂಪುಗಳ ಕೃತ್ಯಗಳನ್ನು ಸಾಕ್ಷ್ಯಾಧಾರವಾಗಿ ನೀಡುತ್ತಾರೆ.

ಪವಿತ್ರ ಖುರ್‌ಆನಿನ ಉಪದೇಶಗಳನ್ನು, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಮಾದರಿ ನಡೆವಳಿಕೆಗಳನ್ನು, ಖುಲಫಾಉರ್ರಾಶಿದೀನ್ (ಇಸ್ಲಾಮ್ ಧರ್ಮದ ಪ್ರಥಮ ನಾಲ್ವರು ಖಲೀಫರು) ಮತ್ತು ಸಹಾಬ ರಝಿಯಲ್ಲಾಹು ಅನ್‌ಹುಮ್‌ರವರ ಭವ್ಯ ಉದಾಹರಣೆಗಳನ್ನು ನೀಡಿ ಇಸ್ಲಾಮ್ ಧರ್ಮವನ್ನು ವಿಶದೀಕರಿಸುವಾಗ ಲೋಕದ ಜನರಿಗೆ ಇಸ್ಲಾಮಿನ ನಿಜವಾದ ತತ್ವಗಳು ತಿಳಿಯುತ್ತದೆ. ಇಸ್ಲಾಮಿನ ನೈಜ ತತ್ವಗಳನ್ನು ಪ್ರಚಾರ ಮಾಡಲು ಮತ್ತು ಅವುಗಳನ್ನು ಅನುಷ್ಠಾನಕ್ಕೆ ತರಲು ಈ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅಲ್ಲಾಹನು ಕಳುಹಿಸಿರುವನು ಎಂದೂ ಅವರು ಸ್ಥಾಪಿಸಿದ ಅಹ್ಮದಿಯಾ ಜಮಾಅತ್ ಈ ತತ್ವಗಳನ್ನು ಪ್ರಚಾರ ಮಾಡುತ್ತಿದೆಯಲ್ಲದೆ ಆ ತತ್ವಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸುತ್ತಿದೆ ಎಂದು ಹೇಳುವಾಗ ಲೋಕದ ಗಮನ ಅಹ್ಮದಿಯಾ ಜಮಾಅತಿನ ಕಡೆಗೆ ತಿರುಗುತ್ತದೆ. ಇಸ್ಲಾಮಿನ ಅತ್ಯಂತ ಕಠಿಣ ಶತ್ರುಗಳ ಮುಂದೆ ಸಹ ಇಸ್ಲಾಮಿನ ಸುಂದರ ಉಪದೇಶಗಳನ್ನು ಉತ್ತಮ ರೀತಿಯಲ್ಲಿ ಪ್ರತಿಪಾದಿಸಿ ಅವುಗಳನ್ನು ನಮ್ಮ ಸ್ವಂತ ಜೀವನದಲ್ಲಿ ಅನುಷ್ಠಾನಕ್ಕೆ ತರಲು ನಾವು ಪ್ರಯತ್ನಿಸಿದರೆ ಅಂತಹ ಜನರ ಮೇಲೆ ಅಸಾಧಾರಣ ಪ್ರಭಾವ ಉಂಟಾಗುವುದನ್ನು ನಾನು ನೋಡಿರುವೆನು.

ಕಳೆದ ವಾರ ಐಯರ್‌ಲೇಂಡಿನ ಪ್ರಥಮ ಮಸ್‌ಜಿದ್ ಉದ್ಘಾಟಿಸಲಾಗಿತ್ತು. ನೀವು ಆ ದಿನ ಖುತುಬ ಆಲಿಸಿರಬಹುದು. ನಂತರ ಸಂಜೆ ಅಲ್ಲಿ ಒಂದು ಸ್ವಾಗತ ಸಮಾರಂಭ ಸಹ ಏರ್ಪಡಿಸಲಾಗಿತ್ತು. ಅದು ಲೈವ್ ಆಗಿ ಬಿತ್ತರಿಸಲಾಗಿತ್ತು. ಆ ಸಂದರ್ಭದಲ್ಲಿ ನಾನು ಮಾಡಿದ ಭಾಷಣವನ್ನು ಸಹ ನೀವು ಆಲಿಸಿರಬಹುದು. ನಾನು ಮುಸ್ಲಿಮೇತರರನ್ನು ಸಂಬೋಧಿಸಿ ಮಾಡಿದ ಆ ಭಾಷಣ

ಅವರ ಮೇಲೆ ಪ್ರಭಾವ ಉಂಟುಮಾಡಿತು. ಗಾಲ್‌ವೇ ನಗರದಲ್ಲಿ ಈ ಸಮಾರಂಭಕ್ಕೆ ಆಗಮಿಸಿದ ಅತಿಥಿಗಳ ಮೇಲೆ ನನ್ನ ಭಾಷಣ ಬಹಳಷ್ಟು ಪ್ರಭಾವ ಬೀರಿದೆ. ಅಲ್ಲಿ ಪ್ರೆಸ್‌ನವರಿಂದ ಸಂದರ್ಶನ ಮಾತ್ರವಲ್ಲ ವಿದ್ಯಾವಂತರಾದ ಜನರೊಂದಿಗೆ ಸಂಭಾಷಣೆ ಸಹ ನಡೆಸಲಾಗಿತ್ತು. ಇಸ್ಲಾಮಿನ ತತ್ವೋಪದೇಶಗಳನ್ನು ತಿಳಿದು ಅವರಲ್ಲಿ ಪ್ರತಿಯೊಬ್ಬರು ಅದರ ಬಗ್ಗೆ ಪ್ರಸ್ತಾಪಿಸಿದರು. ಐಯರ್‌ಲೇಂಡಿನ ಜನರ ಒಂದು ಒಳ್ಳೆಯ ಗುಣವೇನೆಂದರೆ, ಅವರು ತಮ್ಮ ಇಷ್ಟಾನಿಷ್ಟಗಳನ್ನು ಬಹಿರಂಗವಾಗಿ ಪ್ರಕಟಿಸುತ್ತಾರೆ. ಅವರಿಗೆ ಇಷ್ಟವಾಗದಿದ್ದರೆ ಅವರು ಅದರ ಬಗ್ಗೆ ಏನೂ ಹೇಳದೆ ಮೌನವಾಗಿರುತ್ತಾರೆ. ಅನಾವಶ್ಯಕವಾಗಿ ಹೊಗಳುವುದಿಲ್ಲ. ನಾನು ಕೆಲವರ ಅಭಿಪ್ರಾಯಗಳನ್ನು ವಿವರಿಸುವೆನು. ಅವುಗಳನ್ನು ಆಲಿಸುವಾಗ ಅಲ್ಲಾಹನನ್ನು ಸ್ತುತಿಸುತ್ತೇವೆ. ಅಹ್ಮದಿಯಾ ಜಮಾಅತ್ ಮತ್ತು ಇಸ್ಲಾಮ್ ಧರ್ಮದ ಪ್ರಚಾರಕ್ಕೆ ಅಲ್ಲಾಹನು ನಮಗೆ ಎಷ್ಟು ಭಾಗ್ಯ ನೀಡಿರುವನು ಎಂದು ಅಲ್ಲಾಹನನ್ನು ಸ್ತುತಿಸುತ್ತೇವೆ.

ನಾನು ಐಯರ್‌ಲೇಂಡಿಗೆ ತಲಪಿದಾಗ ಮರುದಿನ ಪಾರ್ಲಿಮೆಂಟ್ ಸ್ಪೀಕರ್ ಮತ್ತು ಪಾರ್ಲಿಮೆಂಟಿನ ಕೆಲವು ಸದಸ್ಯರೊಂದಿಗೆ ಭೇಟಿಯ ಕಾರ್ಯಕ್ರಮ ಜರಗಿತು. ಸ್ಪೀಕರ್ ಹೀಗೆ ಹೇಳಿದರು: ನನಗೆ ನಿಮ್ಮ ಜಮಾಅತ್ ಬಗ್ಗೆ ತಿಳಿದಿದೆ. ನಿಮ್ಮ ಜಮಾಅತಿನ ಕೆಲಸಗಳು ನಾನು ಆದರಭಾವದಿಂದ ಕಾಣುತ್ತೇನೆ.

ಇಲ್ಲಿನ ಜಮಾಅತ್ ಚಿಕ್ಕದಾಗಿದ್ದರೂ ಅದು ಬಹಳ ಕಾರ್ಯ ಪ್ರವೃತ್ತವಾಗಿರುತ್ತದೆ. ಆಫ್ರಿಕದಲ್ಲಿ ಅಹ್ಮದಿಯಾ ಜಮಾಅತ್ ಮಾಡುತ್ತಿರುವ ಕೆಲಸಗಳ ಬಗ್ಗೆ ನಾನು ವಿವರಿಸಿದೆ. ನಾವು ಆಸ್ಪತ್ರೆಗಳನ್ನೂ ಶಾಲೆಗಳನ್ನೂ ನಡೆಸುತ್ತಿರುವ ಬಗ್ಗೆ ಮತ್ತು ಬಡ ಜನರಿಗೆ ಕುಡಿಯುವ ನೀರನ್ನು ಸರಬರಾಜು ಮಾಡುವ ಬಗ್ಗೆ ಮತ್ತು ಇತರ ಜನೋಪಯೋಗಿ ಕೆಲಸಗಳ ಬಗ್ಗೆ ವಿವರಿಸಿದೆ. ಇವೆಲ್ಲಾ ಕೆಲಸಗಳನ್ನು ಯಾವುದೇ ತಾರತಮ್ಯ ಇಲ್ಲದೆ ಮಾಡಲಾಗುತ್ತಿದೆ. ನಮ್ಮ ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣ ಕೂಡ ನೀಡಲಾಗುತ್ತಿದೆ ಎಂದು ಹೇಳಿದಾಗ ಅವರಿಗೆ ಆಶ್ಚರ್ಯವಾಯಿತು. ಆದರೆ ಇದರ ಬಗ್ಗೆ ನಿರ್ಬಂಧವಿಲ್ಲವೆಂದೂ ಪೂರ್ಣ ಸ್ವಾತಂತ್ರ್ಯ ನೀಡಲಾಗುತ್ತದೆ ಎಂದೂ ಅವರಿಗೆ ತಿಳಿಸಿದೆ. ಒಬ್ಬರು ಹೀಗೆ ಕೇಳಿದರು: ನಿಮಗೆ ಅಹ್ಮದಿಯೇತರ ವಿಧ್ವಾಂಸರೊಂದಿಗಾಗಲೀ ನೇತಾರರೊಂದಿಗಾಗಲೀ ಚರ್ಚೆ ನಡೆಸುವ ಯಾವುದಾದರೂ ಸಂದರ್ಭ ಲಭಿಸಿದೆಯೋ? ಎಂದು. ನಾನು ಹೇಳಿದೆ: ನಾವು ಯಾವಾಗಲೂ ಅದಕ್ಕೋಸ್ಕರ ಸಿದ್ಧರಿದ್ದೇವೆ. ಅದಕ್ಕಾಗಿ ನೀವು ಏನಾದರೂ ವ್ಯವಸ್ಥೆ ಮಾಡಿದರೆ ನಾವು ಅದರಲ್ಲಿ ಭಾಗವಹಿಸುವೆವು.

ಅನಂತರ ಮಹಿಳೆಯರ ಸ್ವಾತಂತ್ರ್ಯದ ಬಗ್ಗೆ ಪ್ರಶ್ನೆಯನ್ನು ಕೇಳಲಾಯಿತು. ಅದಕ್ಕೂ ಸಮಾಧಾನಕರ ಉತ್ತರ ನೀಡಿದೆ. ಇಸ್ಲಾಮಿನ ಶಿಯಾ ಸುನ್ನೀ ಪಂಗಡಗಳ ಬಗ್ಗೆ ಅವರು ಕೇಳಿದರು. ಯಹೂದಿಯರಲ್ಲೂ ಕ್ರೈಸ್ತರಲ್ಲೂ ಪಂಗಡಗಳು ಇರುವ ಹಾಗೆ ಈ ಪಂಗಡಗಳಿವೆ ಎಂದು ಅವರಿಗೆ ವಿವರಿಸಿ ಕೊಡಲಾಯಿತು. ಇಸ್ಲಾಮ್ ಧರ್ಮದಲ್ಲಿ ಪಂಗಡಗಳಾಗುವ ಬಗ್ಗೆ ಮೊದಲೇ ಭವಿಷ್ಯ ನುಡಿಯಲಾಗಿದೆ. ಈ ಎಲ್ಲಾ ಪಂಗಡಗಳನ್ನು ಒಗ್ಗೂಡಿಸಲು ವಾಗ್ದತ್ತ ಮಸೀಹ್ ಬರುವ ಬಗ್ಗೆ ಭವಿಷ್ಯವಾಣಿ ಇದೆ. ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಜಮಾಅತ್ ಈ ಕೆಲಸ ಮಾಡುತ್ತಿದೆ ಎಂದು ಅವರಿಗೆ ನಾನು ವಿವರಿಸಿ ಹೇಳಿದೆ.

ಗಾಲ್‌ವೇ ಕೌಂಟಿಯ ಡೆಪ್ಯುಟಿ ಮೇಯರ್ ಹೀಗೆ ಹೇಳಿದರು: ವಿವಿಧ ನಂಬಿಕೆಗಳನ್ನು ಹೊಂದಿದ ಜನರು ಒಂದು ಕಡೆ ಜಮಾಯಿಸಿರುವುದನ್ನು ಕಂಡು ಬಹಳ ಸಂತೋಷವಾಗಿದೆ. ಅವರು ಹೇಳಿದರು: "ಈ ಸಮಾರಂಭ ಬಹಳ ಸುಂದರವಾಗಿದೆ." ನನ್ನ ಭಾಷಣದ ಬಗ್ಗೆ ಹೇಳಿದರು– ಶಾಂತಿಯ ಬಗ್ಗೆ ನಿಮ್ಮ ಭಾವನೆಗಳು ನನಗೆ ಪ್ರೋತ್ಸಾಹದಾಯಕವಾಗಿವೆ. ಪ್ರೀತಿಯ ಸಂದೇಶ ಎಷ್ಟು ಶಕ್ತಿಶಾಲಿಯಾಗಿರುತ್ತದೆ ಎಂದು ನನಗೆ ತಿಳಿಯಿತು.

ಇನ್ನೊಬ್ಬ ಅತಿಥಿ ಹೇಳಿದರು: ನನಗೆ ಬಹಳ ಸಂತೋಷವಾಗಿದೆ. ಪ್ರೀತಿ ಮತ್ತು ಶಾಂತಿಯ ಬಗ್ಗೆ ನಿಮ್ಮ ಸಂದೇಶದಿಂದ ನಾನು ತುಂಬಾ ಪ್ರಭಾವಿತನಾಗಿರುವೆನು. ಇನ್ನೊಬ್ಬ ಅತಿಥಿ ಹೇಳಿದರು: "ಇಂದಿನ ಕಾಲದಲ್ಲಿ ಜನರು ಇಸ್ಲಾಮ್ ಬಗ್ಗೆ ಭಯಭೀತರಾಗಿದ್ದಾರೆ. ಈ ಸಮಾರಂಭ ನಮಗೆ ಧಾರ್ಮಿಕ ಸಹಿಷ್ಣುತೆಯ ಪಾಠ ಕಲಿಸಿದೆ. ಖಲೀಫರು ಇಸ್ಲಾಮ್ ಮತ್ತು ಪವಿತ್ರ ಖುರ್‌ಆನ್ ನೀಡಿದ ಪ್ರೀತಿ ಮತ್ತು ಶಾಂತಿಯ ಉಪದೇಶಗಳನ್ನು ವಿವರಿಸಿದ್ದಾರೆ. ಇದು ನಮಗೆಲ್ಲರಿಗೂ ಸಾಂತ್ವನದಾಯಕವಾಗಿದೆ. ಈ ಸಮಾರಂಭದಿಂದ ನಾವು ಬಹಳ ಕಲಿತಿರುವೆವು."

ಒಬ್ಬ ಅತಿಥಿ ನನ್ನ ಭಾಷಣದ ಬಗ್ಗೆ ಹೀಗೆ ಹೇಳಿದರು: ಖಲೀಫರ ಭಾಷಣದಿಂದ ಪ್ರತಿಯೊಬ್ಬ ಅತಿಥಿ ಪ್ರಭಾವಿತರಾದರು. ಖಲೀಫರು ಬಹಳ ಮಹತ್ತಾದ ವಿಷಯಗಳನ್ನು ಹೇಳಿದ್ದಾರೆ.

ಒಬ್ಬ ಮಹಿಳೆ ಹೇಳಿದರು: ಶಾಂತಿ ಮತ್ತು ಜಿಹಾದ್ ಬಗ್ಗೆ ವಿವರಣೆಗಳನ್ನು ಕೇಳಿ ನಾನು ಬಹಳಷ್ಟು ಪ್ರಭಾವಿತಳಾಗಿದ್ದೇನೆ. ಮಸ್‌ಜಿದ್‌ಗೆ ನೀಡಲಾದ ಹೆಸರು ಸಾಮಾಜಿಕ ಸೌಹಾರ್ದಕ್ಕೆ ಸಹಾಯಕವಾಗಿದೆ. ಇಲ್ಲಿಗೆ ಆಗಮಿಸಿ ನನಗೆ ಇಸ್ಲಾಮ್ ಬಗ್ಗೆ ಹೊಸದಾಗಿ ತಿಳುವಳಿಕೆ ಲಭಿಸಿದೆ.

ಗಾಲ್‌ವೇ ಕೌಂಟಿಯ ಒಬ್ಬ ಕೌನ್ಸಿಲರ್ ಹೇಳಿದರು: ನಿಮ್ಮ ಸಂದೇಶ ಲೋಕದಾದ್ಯಂತ ಪ್ರತಿಧ್ವನಿಗೊಳ್ಳುವಂತಾಗಲಿ. ನೀವು ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ವಾಸ್ತವಿಕ ರಾಯಭಾರಿಗಳಾಗುವಂತಾಗಲಿ.

ಇನ್ನೊಬ್ಬ ಮಹಿಳೆ ಹೀಗೆ ಹೇಳಿದರು: "ಈ ಮಸ್‌ಜಿದನ್ನು **'ಮರ್‌ಯಮ್ ಮಸ್‌ಜಿದ್'** ಎಂದು ಹೆಸರಿಸಿರುವುದು ನನಗೆ ಬಹಳ ಸಂತೋಷವನ್ನುಂಟು ಮಾಡಿತು. ಮರ್‌ಯಮರಿಗೆ ಇಸ್ಲಾಮಿನಲ್ಲಿರುವ ಸ್ಥಾನದ ಬಗ್ಗೆ ಮತ್ತು ಪವಿತ್ರ ಖುರ್‌ಆನ್‌ನಲ್ಲಿ ಅವರ ಬಗ್ಗೆ ವಿವರಣೆಗಳಿರುವ ಬಗ್ಗೆ ನನಗೆ ಭಾಷಣದಿಂದ ತಿಳಿಯಿತು.

ಇಸ್ಲಾಮ್‌ಗೆ ವಿರುದ್ಧವಾಗಿ ಮಾತನಾಡುವ ಎಲ್ಲಾ ಕ್ರೈಸ್ತರಿಗೆ ಈ ವಿಷಯವನ್ನು ವಿವರಿಸಿ ಕೊಡಬೇಕಾಗಿದೆ. ಇಸ್ಲಾಮಿನ ಬಗ್ಗೆ ನನಗೆ ಹೆಚ್ಚು ತಿಳಿದಿರಲಿಲ್ಲ. ಖಲೀಫರ ಭಾಷಣವನ್ನು ಆಲಿಸಿ ನಾನು ಬಹಳ ಪ್ರಭಾವಿತೆಯಾದೆನು.''

ಒಬ್ಬ ಪತ್ರಕರ್ತೆ ಮಹಿಳೆ ಹೀಗೆ ಹೇಳಿದರು: ನನಗೆ ಇದರ ಮೊದಲು ಇಸ್ಲಾಮ್ ಬಗ್ಗೆ ಹೆಚ್ಚು ತಿಳಿದಿರಲಿಲ್ಲ. ನಾನು ಈ ದಿನ ಮಸ್‌ಜಿದ್‌ನಲ್ಲಿಯೇ ಇದ್ದೆ. ಖಲೀಫರ ಖುತುಬ ಮತ್ತು ಮಸ್‌ಜಿದ್ ಉದ್ಘಾಟನೆಯ ಭಾಷಣ ಆಲಿಸಿದೆ. ಇಸ್ಲಾಮ್ ಶಾಂತಿಯ ಧರ್ಮ ಎಂದು ನನಗೆ ಮನವರಿಕೆ ಆಯಿತು.

ಮತ್ತೊಬ್ಬ ಪತ್ರಕರ್ತ ಹೇಳಿದರು: ಖಲೀಫರ ಭಾಷಣ ಚಿಂತಾರ್ಹವಾಗಿದೆ. ವಾಸ್ತವಿಕ ಇಸ್ಲಾಮನ್ನು ಭೀಕರವಾದಿಗಳು ಹೂಳಿರುವರೆಂದು ಪ್ರಸ್ತಾಪಿಸಲಾಗಿದೆ. ಖಲೀಫರು ಇಸ್ಲಾಮ್ ಬಗ್ಗೆ ಸ್ಪಷ್ಟವಾಗಿ ವಿವರಿಸಿದ್ದಾರೆ.

ಮತ್ತೋರ್ವ ಅತಿಥಿ, ಐಯರ್‌ಲೇಂಡಿನ ಅಸೆಂಬ್ಲಿಯ ಸದಸ್ಯೆ ಹೀಗೆ ಹೇಳಿದರು: ನಾನು ಮೊತ್ತ ಮೊದಲು ಕೃತಜ್ಞತೆ ಅರ್ಪಿಸುತ್ತೇನೆ. ಇಲ್ಲಿರುವ ಅಹ್ಮದಿಯರು ಬಹಳ ಸೇವೆ ಸಲ್ಲಿಸುತ್ತಿದ್ದಾರೆ. ಇಲ್ಲಿನ ಅಹ್ಮದಿ ಮಹಿಳೆಯರ ಸಂಘಟನೆ ಸಹ ಸಮಾಜ ಸೇವೆ ಮಾಡುತ್ತಿದೆ.

ಗಾಲ್ವೇ ಕೌಂಟಿ ಡಿವಿಜನ್‌ನ ಪೋಲೀಸ್ ಚೀಫ್ ಸುಪರಿಂಟೆಂಡೆಂಟ್ ಹೀಗೆ ಹೇಳಿದರು: ಇಲ್ಲಿ ಭಾಗವಹಿಸಿದುದು ನನಗೆ ಬಹಳ ಗೌರವಾರ್ಹವಾಗಿದೆ. ಅಹ್ಮದಿ ಮುಸ್ಲಿಮರು ತೀವ್ರವಾದವನ್ನು ಪ್ರತಿಪಾದಿಸುವುದಿಲ್ಲವೆಂದು ನನಗೆ ತಿಳಿದಿದೆ. ಇದೇ ಕಾರಣದಿಂದ ಈ ಮಸ್‌ಜಿದ್‌ಗೆ ಮರ್‌ಯಮ್ ಮಸ್‌ಜಿದ್ ಎಂದು ಹೆಸರಿಟ್ಟಿರುತ್ತಾರೆ.

ಒಬ್ಬ ನುರಿತ ರಾಜಕಾರಣಿ ಅಹ್ಮದ್ ಸಾಹೇಬ್ ಹೀಗೆ ಹೇಳಿದರು: ಈ ಮಸ್‌ಜಿದ್‌ಗೆ ಅಸ್ತಿಭಾರ 2010ರಲ್ಲಿ ಹಾಕುವಾಗ ನಾನು ಇಲ್ಲಿಗೆ ಬಂದಿದ್ದೆ. ಈ ದಿನ ಪುನಃ ಬಂದೆ. ಅಹ್ಮದಿಯಾ ಜಮಾಅತಿನ ಪ್ರೀತಿ ಮತ್ತು ಶಾಂತಿಯ ಉಪದೇಶದಿಂದ ನಾನು ಪ್ರಭಾವಿತನಾದೆನು.

ಮಸ್‌ಜಿದಿನ ಸೌಂಡ್ ಸಿಸ್ಟಮ್ ವ್ಯವಸ್ಥೆ ಮಾಡಿದ ಕಂಪೆನಿಯ ಮಾಲಿಕ ಓರ್ವ ಕ್ರೈಸ್ತ ವಿಶ್ವಾಸಿಯಾಗಿದ್ದರು. ಅವರು ಹೇಳಿದರು: ನನ್ನ ಜೀವಿತದಲ್ಲಿ ಒಂದು ಬದಲಾವಣೆ ಉಂಟಾದಂತೆ ನನಗೆ ತೋರುತ್ತದೆ. ಈ ಮಸ್‌ಜಿದ್‌ಗೆ ಬಂದು ನನಗೆ ಮನಸ್ಸಮಾಧಾನ ಉಂಟಾಗಿದೆ.

ಇಲ್ಲಿನ ರೇಡಿಯೋ ಮತ್ತು ಟಿ.ವಿ. ನನ್ನ ಜುಮುಅ ಖುತುಬ, ಉದ್ಘಾಟನೆಯ ಭಾಷಣ ಮತ್ತು ಸಂದರ್ಶನ ರಿಕಾರ್ಡ್ ಮಾಡಿ ತೋರಿಸಿದೆ.

ಟಿ.ವಿ.ಯ ಸಂದರ್ಶಕ ನನ್ನೊಂದಿಗೆ ಕೇಳಿದರು– **ಎಲ್ಲರೊಂದಿಗೆ ಪ್ರೀತಿ ಯಾರೊಂದಿಗೂ ದ್ವೇಷವಿಲ್ಲ**ವೆಂದು ನಿಮ್ಮ ಧ್ಯೇಯವಾಕ್ಯವಾಗಿದೆ. ಇಂದಿನ ಮುಸ್ಲಿಮರು ಮಾಡುತ್ತಿರುವ ಕೆಲಸ ನಿಮ್ಮ ಚಿಂತೆಗೆ ಕಾರಣವಾಗುವುದಿಲ್ಲವೇ? ನಾನು ಹೇಳಿದೆ: ಇಸ್ಲಾಮ್ ಉಪದೇಶಿಸುತ್ತಿರುವುದು ಯಾರ ಹಕ್ಕುಗಳನ್ನೂ ಅಪಹರಿಸಬಾರದು, ಯಾರ ಮೇಲೂ ದೌರ್ಜನ್ಯ ಮಾಡಬಾರದು ಎಂದಾಗಿದೆ. ನಾವು ಇಸ್ಲಾಮಿನ ವಾಸ್ತವಿಕ ಉಪದೇಶಗಳನ್ನು ಪಾಲಿಸುತ್ತೇವೆ. ಇದೇ ಅಸ್ತಿಭಾರದ ಮೇಲೆ ನಮ್ಮ ಧ್ಯೇಯವಾಕ್ಯವಿದೆ ಎಂದು ಹೇಳಿದೆ. ಲೋಕದ ಬಗ್ಗೆ ನಿಮ್ಮ ಅಭಿಪ್ರಾಯ ಏನೆಂದು ಅವರು ಕೇಳಿದರು. ನಾನು ಹೇಳಿದೆ– ಲೋಕ ವೇಗವಾಗಿ ವಿನಾಶದ ಕಡೆಗೆ ಸಾಗುತ್ತಿದೆ. ಇದು ಕೇವಲ ಮುಸ್ಲಿಮ್ ದೇಶಗಳಿಗೆ ಮಾತ್ರ ಅನ್ವಯಿಸುವುದಿಲ್ಲ. ಯುರೋಪಿನ ದೇಶಗಳೂ ಇದಕ್ಕೆ ಪಾತ್ರವಾಗುತ್ತಿದೆ. ಸಹನೆ ಮತ್ತು ವಿವೇಕದಿಂದ ವರ್ತಿಸದಿದ್ದರೆ ಮತ್ತು ಶಾಂತಿಗೋಸ್ಕರ ಸರಿಯಾಗಿ ಪ್ರಯತ್ನ ಮಾಡದಿದ್ದರೆ ಬಹಳ ದೊಡ್ಡ ವಿನಾಶ ಸಂಭವಿಸುವುದು. ಅದು ಮೂರನೇ ಜಾಗತಿಕ ಮಹಾಯುದ್ಧದ ರೂಪದಲ್ಲಿ ಪ್ರತ್ಯಕ್ಷವಾಗಲಿದೆ ಎಂದು ಹೇಳಿದೆ. ಈ ಎಲ್ಲ ವಿಷಯಗಳನ್ನು ಅವರು ಟಿ.ವಿ. ಕಾರ್ಯಕ್ರಮದಲ್ಲಿ ಪ್ರಸಾರ ಮಾಡಿದರು.

ಐಯರ್‌ಲೇಂಡ್ ಜಮಾಅತಿನ ಅಧ್ಯಕ್ಷ ಮತ್ತು ಮುಬಲ್ಲಿಗರ ಸಂದರ್ಶನವನ್ನು ಎಫ್.ಎಂ. ರೇಡಿಯೋದಲ್ಲಿ ಬಿತ್ತರಿಸಲಾಯಿತು.

ಐಯರ್‌ಲೇಂಡಿನ ಪತ್ರಿಕೆ **ಐಯಿರಿಶ್ ಟೈಮ್** ಮಸ್‌ಜಿದ್ ಬಗ್ಗೆ ವರದಿ ನನ್ನ ಫೋಟೋ ಮತ್ತು ಮಸ್‌ಜಿದ್ ಫೋಟೋ ಸಹಿತ ಸೆಪ್ಟಂಬರ್ 29ರಂದು ಪ್ರಕಟಿಸಿತು. ಪತ್ರಿಕೆಯ ಒಂದು ಪುಟದ ಮುಕ್ಕಾಲು ಭಾಗ ಇದಕ್ಕೋಸ್ಕರ ವಿನಿಯೋಗಿಸಲಾಗಿತ್ತು. ನಾನು ವಿವಿಧ ದೇಶಗಳಿಗೆ ನೀಡಿದ ಸಂದರ್ಶನಗಳಲ್ಲೂ ಅಲ್ಲಾಹನು ಅಸಾಧಾರಣ ಅನುಗ್ರಹಗಳನ್ನು ದಯಪಾಲಿಸಿದನು ಅವನು ತನ್ನ ಬೆಂಬಲಗಳನ್ನು ಪ್ರಕಟಿಸಿದನು.

ಇವುಗಳೆಲ್ಲಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನು ನೀಡಿದ ವಾಗ್ದಾನಗಳ ಈಡೇರುವಿಕೆಗಳಾಗಿವೆ. ನಾವು ಕೇವಲ ಸಾಮಾನ್ಯವಾದ ಪ್ರಯತ್ನ ಮಾಡುತ್ತೇವೆ. ಆದರೆ ಅಲ್ಲಾಹನು ಅಪರಿಮಿತ ಅನುಗ್ರಹಗಳನ್ನು ದಯಪಾಲಿಸುತ್ತಾನೆ. ಇದರಿಂದ ಅಹ್ಮದಿಯರ ವಿಶ್ವಾಸ ಬಲಿಷ್ಠವಾಗುತ್ತದೆ ಮತ್ತು ಬಲಿಷ್ಠವಾಗಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ''ಸತ್ಯವನ್ನು ಬೆಳಗಿಸಲು ಮತ್ತು ನಮ್ಮ ಈ ಜಮಾಅತನ್ನು ಬೆಂಬಲಿಸಲು ಅಲ್ಲಾಹನು ಅದ್ಭುತಕರವಾದ ರೀತಿಯಲ್ಲಿ ಇಷ್ಟೆಲ್ಲಾ ದೃಷ್ಟಾಂತಗಳನ್ನು ತೋರಿಸುತ್ತಿರುವನು. ಆದರೂ ಈ ಜನರ ಕಣ್ಣುಗಳು ತೆರೆಯುವುದಿಲ್ಲ. ಶತ್ರುಗಳು ಸತ್ಯವನ್ನು ಅಲ್ಲಗೈಯುತ್ತಿರುವಾಗ ಅಲ್ಲಾಹನಿಂದ ದೃಷ್ಟಾಂತಗಳು ಹೆಚ್ಚು ಹೆಚ್ಚಾಗಿ ಪ್ರಕಟವಾಗುವುದು ಅಲ್ಲಾಹನ ಒಂದು ನಡೆವಳಿಕೆ ಆಗಿದೆ.''

ಮತಪಂಡಿತರೆಂದು ಹೇಳಿಕೊಳ್ಳುವ ಜನರ ಮತ್ತು ಸ್ವಾರ್ಥಿಗಳಾದ ನಾಯಕರ ಹಿಡಿತದಿಂದ ಮುಸ್ಲಿಮ್ ಸಮುದಾಯವು ಬಿಡುಗಡೆ ಹೊಂದಿ ಇಸ್ಲಾಮಿನ ಸುಂದರ ಉಪದೇಶಗಳನ್ನು ಅನುಷ್ಠಿಸುವವರೂ ಅವುಗಳನ್ನು ಪ್ರಚಾರ ಮಾಡುವವರೂ ಆಗುವಂತೆ ಅಲ್ಲಾಹನು ಮಾಡಲಿ.

ಅಲ್ಲಾಹನು ಕಳುಹಿಸಿದ ಇಮಾಮರನ್ನು ಅವರು ನಂಬುವವರಾಗಲಿ. ಈ ಜನರು ನಮ್ಮವರನ್ನು ಶಹೀದ್ ಮಾಡುತ್ತಾರೆ. ಆದರೆ ಅವರಿಗೆ ಅದರಿಂದ ಸಿಗುವ ಸಮಾಧಾನವೇನು? ನಮ್ಮ ವಿರೋಧಿಗಳಾದ ನೂರಾರು ಜನರು ಪ್ರತಿ ದಿನ ಅಥವಾ ಪ್ರತಿ ವಾರ ಸಾಯುತ್ತಾ ಇದ್ದಾರೆ. ಪಾಕಿಸ್ತಾನದಲ್ಲಿ ಈಗ ಹಿಂಸಾಚಾರ ಎಲ್ಲಾ ದಿಕ್ಕುಗಳಲ್ಲೂ ವ್ಯಾಪಕವಾಗಿದೆ. ಅಹ್ಮದಿಯರಾದ ನಾವು ನಮ್ಮ ಕರ್ತವ್ಯಗಳನ್ನು ಚೆನ್ನಾಗಿ ಈಡೇರಿಸುವ ಭಾಗ್ಯ ಅಲ್ಲಾಹನು ನಮಗೆ ದಯಪಾಲಿಸಲಿ.

ಮೀರ್‌ಪುರ ಖಾಸ್‌ನಲ್ಲಿ ಶಹೀದ್ ಮಾಡಲಾದ ಡಾಕ್ಟರ್ ಮುಬಶ್ಶಿರ್ ಅಹ್ಮದ್ ಸಾಹಿಬ್ ಅವರ ನಮಾಝೆ ಜನಾಝಾ ಗಾಯಿಬ್ ಅನುಷ್ಠಿಸುವೆನು. ಇನ್ನೊಂದು ಜನಾಝಾ ಹಾಝಿರ್ ಇದೆ. ಅದು ಡಾಕ್ಟರ್ ಅಬ್ದುಲ್ ಮುನ್‌ಇಮ್ ಸಾಹೇಬರ ಪತ್ನಿ ಡಾಕ್ಟರ್ ರೂಬೀನಾ ಕರೀಮ್ ಸಾಹೇಬರದಾಗಿದೆ. ಸೆಪ್ಟೆಂಬರ್ 27ರಂದು ನಿಧನ ಹೊಂದಿದರು. إِنَّا لِلَّهِ وَإِنَّا إِلَيْهِ رَاجِعُونَ

ಶಹೀದ್ ಡಾಕ್ಟರ್ ಮುಬಶ್ಶಿರ್ ಅಹ್ಮದ್ ಸಾಹಿಬ್ ಸೆಪ್ಟೆಂಬರ್ 22ರಂದು ತಮ್ಮ ಕ್ಲಿನಿಕ್‌ನಲ್ಲಿದ್ದಾಗ ಅಪರಿಚಿತ ವ್ಯಕ್ತಿಯೊಬ್ಬ ಅವರನ್ನು ಗುಂಡು ಹಾರಿಸಿ ಕೊಂದನು. إِنَّا لِلَّهِ وَإِنَّا إِلَيْهِ رَاجِعُونَ ಅವರು ಸಮಾಜ ಸೇವೆ ಮಾಡುವವರಾಗಿದ್ದರು. ಹಿಂದೆ ಕಾಶ್ಮೀರದಲ್ಲಿ ಭೂಕಂಪವಾದಾಗ 22 ದಿವಸ ಅಲ್ಲಿ ಸಂತ್ರಸ್ತರಿಗೆ ಸೇವೆ ಸಲ್ಲಿಸಿದ್ದರು. ಅವರ ಪ್ರಾಯ 45. ಅವರು ಮೂಸಿ ಆಗಿದ್ದರು.

ಮೂರನೆಯ ಜನಾಝಾ ಸಿಸ್ಟರ್ ನಈಮ ಲತೀಫ ಸಾಹೇಬ ಅವರದು. ಅಲ್ಲಾಹನು ಮೃತರಿಗೆ ಉನ್ನತ ಪದವಿಯನ್ನು ನೀಡಿ ಅನುಗ್ರಹಿಸಲಿ. ಅವರ ಕುಟುಂಬದವರಿಗೆ ಸಹನೆಯನ್ನು ದಯಪಾಲಿಸಲಿ – ಆಮೀನ್.

--------------*****--------------

*Friday Sermon delivered by Hadrath Khaleefatul Masih Al Khamis(atba)*

*at Masjid Baithul Futhuh, London on 03-10-2014.*

Summarized by *Nazarath Nashr-O-Isha'ath, Qadian*

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team,** *Ahmadiyya Muslim Jama`at, Karnataka*

**Email**: *khutuba.kannada@gmail.com*